ಬೆಳಕು ಮೂಡುತ್ತಿದ್ದಂತೆ ಶುರುವಾಗಿತ್ತು ತಳಮಳ.

ಸುತ್ತಮುತ್ತ ಯಾರೂ ಇರಲಿಲ್ಲ, ಸದ್ಯ. ನಿನ್ನೆ ತನ್ನ ಕಣ್ಣಿಗೆ ಬಿದ್ದಿದ್ದರಿಂದ ಆ ನಿರ್ಲಜ್ಜರು ಈವೊತ್ತು ಬಂದಿಲ್ಲ ಎಂದುಕೊಳ್ಳುತ್ತಾ ನೀರು ತುಂಬಿಟ್ಟು, ನದಿಯಲ್ಲಿ ಮಿಂದು, ಒದ್ದೆಬಟ್ಟೆಯಲ್ಲಿ ಮೇಲೆ ಬರುತ್ತಾ, ಎದುರಿಗೆ ನೋಡಿ ಅಚೇತನಳಾಗಿ ನಿಂತುಬಿಟ್ಟಳು!

ನಿನ್ನೆ ಕಂಡ ಆ ಪುರುಷ ಎದುರಿಗೇ ಇದ್ದಾನಲ್ಲ?!

ಇವನೇನು ದೇವರೇ ಇದ್ದಕ್ಕಿದ್ದಂತೆ ಪ್ರತ್ಯಕ್ಷನಾಗಲು?

ಒಳಗೆ ಹುಟ್ಟಿದ ನಡುಕ, ಹೊರಗಿನ ಚಳಿಯನ್ನು ಮೀರಿಸಿದಂತೆ ಭಾಸವಾಗಿ, ಗಡಬಡಿಸಿ ಕೊಡವನ್ನೆತ್ತಿಕೊಂಡು ಹೊರಡಲು ಅನುವಾದಳು. ಅವನು ಧೈರ್ಯ, ದಿಟ್ಟತನಗಳೇ ಮೂರ್ತಿವೆತ್ತಂತೆ. ಎದುರಿಗೆ ಬಂದು, ದಾರಿಗಡ್ಡ ನಿಂತ.

'ನಿಲ್ಲು!' ಎಂದ ಗತ್ತಿನ ಧ್ವನಿಯಲ್ಲಿ.

ಅವಳಿಗೆ ಹೆದರಿಕೆಯೊಂದಿಗೆ ಸಿಟ್ಟೂ ಬಂತು. ಎಷ್ಟು ಧೈರ್ಯ ಇವನಿಗೆ?

'ನೀನು... ಗೌತಮರ ಪತ್ನಿಯಲ್ಲವೇ?' ಮುಗುಳ್ನಗುತ್ತ ಕೇಳಿದ. ಉತ್ತರಿಸಲಾಗದಷ್ಟು ಕೋಪಗೊಂಡಿದ್ದಳವಳು.

ಅವನ ಮುಖದಲ್ಲಿ ಇನ್ನಷ್ಟು, ಮತ್ತಷ್ಟು ನಗೆಯರಳಿತು.

'ಅಹಲ್ಯಾ ಅಲ್ಲವೇ ನಿನ್ನ ಹೆಸರು? ನೀನು ಚೆಲುವೆ ಎಂದು ಕೇಳಿದ್ದೆ. ಆದರೆ... ಇಷ್ಟು ಚೆಲುವೆಯೆಂದುಕೊಂಡಿರಲಿಲ್ಲ!' ಈಗವಳಿಗೆ ತಡೆಯಲಾಗಲಿಲ್ಲ.

'ದಾರಿ ಬಿಡು, ಪಾಖಂಡಿ!' ಅವಡುಗಚ್ಚಿ ಉಸುರಿದಳು.

'ಈವೊತ್ತು ಬಿಡುವೆ, ಹೋಗು. ಆದರೆ... ನಿಲ್ಲು... ನಾಳೆ ಬರುತ್ತೇನೆ. ನಿನಗಾಗಿ!... ನಿನ್ನಂಥ ಸುಂದರಿಯನ್ನು ನಾನಿದುವರೆಗೆ ಕಂಡಿಲ್ಲ ಅಹಲ್ಯಾ ಕಾಡಿನ ಮಧ್ಯೆ ಇದ್ದುಕೊಂಡು, ಗೆಡ್ಡೆಗೆಣಸು ತಿಂದರೂ ಎಂಥ ಸೌಂದರ್ಯ ನಿನ್ನದು!'

ಅವನು ತನ್ಮಯತೆಯಿಂದ ಹೇಳುತ್ತಲೇ ಇದ್ದ. ಕೆನ್ನೆಗೆ ಬಾರಿಸಲೇ ಎಂಬಷ್ಟು ಸಿಟ್ಟು ಅವಳಿಗೆ. ಆದರೆ, ಹಾಗೆ ಮಾಡಲಾಗಲಿಲ್ಲ! ಮುಖ ತಿರುಗಿಸಿಕೊಂಡು, ಸರಸರ ಹೊರಟು ಬಂದುಬಿಟ್ಟಳು.

ಆ ದಿನವೆಲ್ಲ ಕುದಿಯುತ್ತಲೇ ಇದ್ದಳು. ಸ್ವಲ್ಪವಾದರೂ ನಾಚಿಕೆ, ಅಂಜಿಕೆ ಬೇಡವೇ ಆ ಅನಾಚಾರಿಗೆ? ಋಷಿ ಪತ್ನಿಯನ್ನು ಅಡ್ಡಗಟ್ಟುವಷ್ಟು ಪೊಗರೇ? ಏನೋ ಅಂದನಲ್ಲ... ಹಾಂ... 'ಕಾಡಿನ ಮಧ್ಯೆ ಇದ್ದುಕೊಂಡೂ ಎಂಥ ಸೌಂದರ್ಯ ನಿನ್ನದು!' ಥುತ್, ಲಂಪಟ! ಆದರೂ ಆ ಹೊಗಳಿಕೆಗೆ ಒಂದು ಕ್ಷಣ ಮನ ಮೃದುವಾಗಿ ಮಿಡಿಯಿತಲ್ಲ ಎನಿಸಿದಾಗ ಅಹಲ್ಯೆ ಬೆಚ್ಚಿಬಿದ್ದಳು.

ದೇವರೇ, ಇದೇನಿದು? ಎಂಥ ಅನರ್ಥದ ಯೋಚನೆ ಬರುತ್ತಿದೆಯಲ್ಲ! ಯಾರಿಗಾದರೂ ತಿಳಿದರೆ... ಸುತ್ತಮುತ್ತ ನೋಡಿ ಭ್ರಾಂತಗೊಂಡಳು. ಒಮ್ಮೆಯಾದರೂ ಗೌತಮ, ತನ್ನ ಪತಿ, ನನ್ನನ್ನು ಸುಂದರಿಯೆಂದು ಹೊಗಳಲಿಲ್ಲ! ಹೊಗಳಿಕೆಯೇನು ಬಂತು? ಸರಿಯಾಗಿ ಮಾತನಾಡಲೂ ವ್ಯವಧಾನವಿಲ್ಲ.

ರಾತ್ರಿ–ಹಗಲು ಯಾಂತ್ರಿಕವಾಗಿ, ನಿಸ್ಸಾರವಾಗಿ ಕಳೆದು ಹೋಗುತ್ತಿವೆ.

ತಾನು ಚಿಕ್ಕವಳಿದ್ದಾಗ ಅಪ್ಪಅಮ್ಮ ಮುದ್ದಾಡಿದ್ದೆಷ್ಟು?!

'ನಮ್ಮ ಮಗಳು ರಾಜಕುಮಾರಿ, ದಂತದ ಗೊಂಬೆ' ಎಂದು ಸಿಂಗರಿಸಿ, ಕೊಂಡಾಡಿ, ನಲಿದಿದ್ದೆಷ್ಟು!

ಅನಂತರ ಎಷ್ಟೋ ಸಮಯದ ನಂತರ... ಈಗಷ್ಟೇ... ಮತ್ತೆ ಕೇಳಿಸಿದೆ ತನ್ನ ಸೌಂದರ್ಯದ ಪ್ರಶಂಸೆ! ಹೂಂ, ಅವನು ಹೇಳಿದ್ದರಲ್ಲಿ ತಪ್ಪಾದರೂ ಏನಿದೆ?

ನಾನು ನಿಜಕ್ಕೂ ಸುಂದರಿ! ಬಹಳ ದಿನಗಳ ನಂತರ ದರ್ಪಣದೆದುರಿಗೆ ನಿಂತು, ತನ್ನನ್ನು ತಾನು